# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN): U40109KA1999SGC025521

**(ಕಂಪನಿಯ ಅಧಿಕೃತ ಕಚೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009)**

**ಓದಲಾಗಿದೆ:**

1. ನಿಗಮದ ಅಧಿಸೂಚನೆ ಸಂಖ್ಯೆ: ಕವಿಮಂ/ಬಿ5/721/80-81, ದಿನಾಂಕ: 14.04.1997.
2. ನಿಗಮದ ಪತ್ರ ಸಂಖ್ಯೆ: ಕವಿಪ್ರನಿನಿ/ಬಿ5/721/2010-11, ದಿನಾಂಕ: 13.01.2011.
3. ಸರ್ಕಾರದ ಪತ್ರ ಸಂಖ್ಯೆ: ಇಎನ್/62/ಇಇಬಿ/2011, ದಿನಾಂಕ: 12.05.2011.
4. ದಿನಾಂಕ: 20.12.2018 ರಂದು ನಡೆದ ನಿಗಮದ ನಿರ್ದೇಶಕರುಗಳ 113ನೇ ಸಭೆಯ ಠರಾವು ಸಂಖ್ಯೆ: 113/A02.

**ಪೀಠಿಕೆ:**

(i) ಸೇವೆಯಲ್ಲಿರುವಾಗಲೇ ನಿಧನ ಹೊಂದಿದ ನೌಕರರ ಅವಲಂಬಿತರಲ್ಲಿ ಒಬ್ಬರಿಗೆ ಗುಂಪು 'ಸಿ' ಅಥವಾ 'ಡಿ' ಹುದ್ದೆಗಳಿಗೆ, ಅನುಕಂಪದ ಆಧಾರದಲ್ಲಿ ನೌಕರಿಯನ್ನು ನೀಡಲು ಕವಿಮಂ ನೌಕರರ ನೇಮಕಾತಿ (ಅನುಕಂಪದ ಆಧಾರದಲ್ಲಿ ನೇಮಕಾತಿ) ನಿಯಮಾವಳಿಗಳು, 1997 ನ್ನು ಅಧಿಸೂಚನೆ ಸಂಖ್ಯೆ: ಕವಿಮಂ/ಬಿ5/721/80-81, ದಿನಾಂಕ: 17.04.1997 ರಲ್ಲಿ ದಿನಾಂಕ: **17.04.1997** ರಿಂದ ಜಾರಿಗೆ ಬರುವಂತೆ ರೂಪಿಸಲಾಗಿದೆ.

(ii) ಕವಿಮಂ ನೌಕರರ ನೇಮಕಾತಿ (ಅನುಕಂಪದ ಆಧಾರದಲ್ಲಿ ನೇಮಕಾತಿ) ನಿಯಮಾವಳಿಗಳು 1997, ಅಧಿಸೂಚನೆ ಸಂಖ್ಯೆ: ಕವಿಮಂ/ಬಿ5/721/80-81, ದಿನಾಂಕ: 17.04.1997 ರ ನಿಯಮಾವಳಿ-**4(6)** ರಲ್ಲಿ ಈ ಕೆಳಗಿನ ನಿಯಮವಿರುತ್ತದೆ:

***"Appointment under these regulations shall be considered only once for a family"***

(iii) ಸದರಿ ನಿಯಮದ ಪ್ರಕಾರ ಕರ್ತವ್ಯದಲ್ಲಿರುವಾಗಲೇ ನಿಧನ ಹೊಂದಿದ ನೌಕರರ ಅವಲಂಬಿತರು ಕುಟುಂಬದಲ್ಲಿ ಎರಡನೇ ಬಾರಿಗೆ ಅನುಕಂಪದ ಆಧಾರದಲ್ಲಿ ಉದ್ಯೋಗವನ್ನು ಕೋರಿ ಸಲ್ಲಿಸಿದ್ದ ಅರ್ಜಿಗಳನ್ನು ಅವಕಾಶವಿಲ್ಲವೆಂಬ ಕಾರಣದಿಂದ ತಿರಸ್ಕರಿಸಲಾಗಿತ್ತು. ಕರ್ತವ್ಯದಲ್ಲಿರುವಾಗಲೇ ನಿಧನ ಹೊಂದಿದ ನೌಕರರ ಅವಲಂಬಿತರು ಅನುಕಂಪದ ಆಧಾರದ ಮೇಲೆ ಕುಟುಂಬದಲ್ಲಿ ಎರಡನೇ ಬಾರಿಗೆ ಉದ್ಯೋಗವನ್ನು ನೀಡುವಂತೆ ಕೋರುತ್ತಿರುವುದರಿಂದ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸ್ಪಷ್ಟೀಕರಣವನ್ನು ಕೋರಿ ದಿನಾಂಕ: 13.01.2011 ರಲ್ಲಿ ಸರ್ಕಾರಕ್ಕೆ ಪತ್ರ ಬರೆಯಲಾಗಿತ್ತು.

(iv) ನಿಗಮದ ಪತ್ರಕ್ಕನುಗುಣವಾಗಿ ಸರ್ಕಾರದ ದಿನಾಂಕ: 12.05.2011 ರ ಪತ್ರದಲ್ಲಿ "*ಮೃತ ಸರ್ಕಾರಿ ನೌಕರನ ಅವಲಂಬಿತರಲ್ಲಿ ಅರ್ಹರಾದ ಒಬ್ಬರು ಅನುಕಂಪದ ಆಧಾರದ ಮೇಲೆ ನೇಮಕಾತಿ ಹೊಂದಿದ ನಂತರ ಅವರು ಸೇವೆಯಲ್ಲಿರುವಾಗಲೇ ಮೃತರಾದಲ್ಲಿ ಅವರ ಅವಲಂಬಿತರಲ್ಲಿ ಅರ್ಹರಾದ ಒಬ್ಬರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡಲು ನಿಯಮಗಳಲ್ಲಿ ಯಾವುದೇ ನಿರ್ಬಂಧವಿರುವುದಿಲ್ಲವೆಂದು ಸ್ಪಷ್ಟೀಕರಿಸಲಾಗಿರುತ್ತದೆ.*" ಅದರಂತೆ ದಿನಾಂಕ: **12.05.2011** ರ ನಂತರ ಕರ್ತವ್ಯದಲ್ಲಿರುವಾಗಲೇ ನಿಧನ ಹೊಂದಿದ ನಿಗಮದ ನೌಕರರ ಹಲವಾರು ಪ್ರಕರಣಗಳಲ್ಲಿ ಕವಿಮಂ ನೌಕರರ ನೇಮಕಾತಿ (ಅನುಕಂಪದ ಆಧಾರದಲ್ಲಿ ನೇಮಕಾತಿ) ನಿಯಮಾವಳಿಗಳು, 1997 ಅನುಸಾರ ಕುಟುಂಬದಲ್ಲಿ ಎರಡನೇ ಬಾರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿಯನ್ನು ನೀಡಲಾಗುತ್ತಿದೆ.

(v) ದಿನಾಂಕ: **12.05.2011** ಕ್ಕಿಂತ ಹಿಂದೆ ಮೃತ ನಿಗಮದ ನೌಕರರ ಅವಲಂಬಿತರಲ್ಲಿ ಅರ್ಹರಾದ ಒಬ್ಬರು ಅನುಕಂಪದ ಆಧಾರದಲ್ಲಿ ನೇಮಕಾತಿ ಹೊಂದಿದ ನಂತರ ಅವರು ಸೇವೆಯಲ್ಲಿರುವಾಗಲೇ ಮೃತರಾಗಿದ್ದರಿಂದ ಅವರ ಅವಲಂಬಿತರಲ್ಲಿ ಅರ್ಹರಾದ ಒಬ್ಬರಿಗೆ ಎರಡನೇ ಬಾರಿಗೆ ಅನುಕಂಪದ ಆಧಾರದಲ್ಲಿ ನೇಮಕಾತಿಯನ್ನು ನೀಡಲು ಅವಕಾಶವಿಲ್ಲವೆಂದು ತಿರಸ್ಕರಿಸಿದ್ದರಿಂದ ಅಂಥಹ ಹಲವಾರು ಅವಲಂಬಿತರು ಅನುಕಂಪದ ಆಧಾರದಲ್ಲಿ ನೇಮಕಾತಿಗಾಗಿ ಪರಿಗಣಿಸುವಂತೆ ಮನವಿ ಪತ್ರಗಳನ್ನು ಸಲ್ಲಿಸಿರುತ್ತಾರೆ.

(vi) ಸದರಿ ವಿಷಯವನ್ನು ದಿನಾಂಕ: 20.12.2018 ರಂದು ನಡೆದ ನಿಗಮದ ನಿರ್ದೇಶಕರುಗಳ **113**ನೇ ಸಭೆಯಲ್ಲಿ ನಿರ್ಣಯಕ್ಕಾಗಿ ಮಂಡಿಸಲಾಗಿತ್ತು. ವಿಷಯವನ್ನು ಕೂಲಂಕುಷವಾಗಿ ಪರಿಶೀಲಿಸಿದ ಮಂಡಳಿ, ಮೃತ ನಿಗಮದ ನೌಕರರ ಅವಲಂಬಿತರಲ್ಲಿ ಅರ್ಹರಾದ ಒಬ್ಬರು ಅನುಕಂಪದ ಆಧಾರದಲ್ಲಿ ನೇಮಕಾತಿ ಹೊಂದಿದ ನಂತರ ಅವರು ಸೇವೆಯಲ್ಲಿರುವಾಗಲೇ ಮೃತರಾದಲ್ಲಿ ಅವರ ಅವಲಂಬಿತರು ದಿನಾಂಕ: **12.05.2011** ಕ್ಕಿಂತಲೂ ಹಿಂದೆ ನಿಗಮ/ ಎಸ್ಕಾಂಗಳಲ್ಲಿ ಅನುಕಂಪದ ಆಧಾರದಲ್ಲಿ ನೇಮಕಾತಿಗೆ ಅರ್ಜಿ ಸಲ್ಲಿಸಿ, ತಿರಸ್ಕೃತವಾಗಿರುವ/ ಇತ್ಯರ್ಥವಾಗದೆ ಬಾಕಿ ಉಳಿದಿರುವ ಅರ್ಹ ಪ್ರಕರಣಗಳಲ್ಲಿ ಅರ್ಹರಾದ ಒಬ್ಬರಿಗೆ ಎರಡನೇ ಬಾರಿಗೆ ಅನುಕಂಪದ ಆಧಾರದಲ್ಲಿ ನೇಮಕಾತಿಯನ್ನು ನೀಡಲು ನಿರ್ಣಯಿಸಿರುತ್ತದೆ.

ಆದ್ದರಿಂದ ಈ ಕೆಳಕಂಡಂತೆ ಆದೇಶಿಸಲಾಗಿರುತ್ತದೆ:-

**ಆದೇಶ ಸಂಖ್ಯೆ: ಕವಿಪ್ರನಿನಿ/ಬಿ5(ಸಿ)/721/2012-13 ಬೆಂಗಳೂರು, ದಿನಾಂಕ:** 28 JAN 2019

ದಿನಾಂಕ: **12.05.2011** ಕ್ಕಿಂತ ಹಿಂದೆ ಮೃತ ನಿಗಮದ ನೌಕರರ ಅವಲಂಬಿತರಲ್ಲಿ ಒಬ್ಬರು ಅನುಕಂಪದ ಆಧಾರದಲ್ಲಿ ನೇಮಕಾತಿ ಹೊಂದಿದ ನಂತರ ಅವರೂ ಸಹ ಸೇವೆಯಲ್ಲಿರುವಾಗಲೇ ಮೃತರಾಗಿದ್ದರಿಂದ ಅವರ ಅವಲಂಬಿತರಲ್ಲಿ ಅರ್ಹರಾದ ಮತ್ತೊಬ್ಬರು ಎರಡನೇ ಬಾರಿಗೆ ಅನುಕಂಪದ ಆಧಾರದಲ್ಲಿ ನೇಮಕಾತಿ ಬಯಸಿ ಈಗಾಗಲೇ ಸಲ್ಲಿಸಿರುವ ಅರ್ಜಿಗಳನ್ನು ಪರಿಗಣಿಸಿ ಈ ಕೆಳಕಂಡ ಷರತ್ತು ಹಾಗೂ ನಿಬಂಧನೆಗಳಿಗೊಳಪಟ್ಟು ಅನುಕಂಪದ ಆಧಾರದಲ್ಲಿ ನೇಮಕಾತಿ ನೀಡಲು ನಿಗಮವು ಅನುಮೋದಿಸಿದೆ:-

1. ಅಭ್ಯರ್ಥಿಗಳು ನಿಯಮಾನುಸಾರ ಅನುಕಂಪದ ಆಧಾರದಲ್ಲಿ ನೇಮಕಾತಿ ಹೊಂದಲು ಅರ್ಹರಿದ್ದು, ಕವಿಮಂ ನೌಕರರ ನೇಮಕಾತಿ (ಅನುಕಂಪ ಆಧಾರದಲ್ಲಿ ನೇಮಕಾತಿ) ನಿಯಮಾವಳಿಗಳು 1997, ನಿಯಮ 4(6) ರ ಅನುಸಾರ ಕುಟುಂಬದಲ್ಲಿ ಎರಡನೇ ಬಾರಿಗೆ ನೇಮಕಾತಿಯನ್ನು ನೀಡಲು ಅವಕಾಶವಿರುವುದಿಲ್ಲವೆಂದು ತಿರಸ್ಕೃತಗೊಂಡು ಇತ್ಯರ್ಥವಾಗದೇ ಬಾಕಿ ಉಳಿದಿರುವ ಅರ್ಹ ಪ್ರಕರಣಗಳನ್ನು ಮಾತ್ರ ಪ್ರಸ್ತುತ ಪರಿಗಣಿಸಿ ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡಲು ಕ್ರಮವಹಿಸುವುದು.
2. ಅನುಕಂಪದ ಆಧಾರದಲ್ಲಿ ನೇಮಕಾತಿಗೆ ಅರ್ಹರಾಗಲು ಅಭ್ಯರ್ಥಿಗಳು, ಕವಿಮಂ ನೌಕರರ ನೇಮಕಾತಿ (ಅನುಕಂಪದ ಆಧಾರದಲ್ಲಿ ನೇಮಕಾತಿ) ನಿಯಮಾವಳಿಗಳು 1997 ರ ಅನುಸಾರ ಅಗತ್ಯ ಷರತ್ತು ಹಾಗೂ ನಿಬಂಧನೆಗಳಾದ – ಅರ್ಜಿಯನ್ನು ನಿಗಧಿತ ಅವಧಿಯೊಳಗೆ ಸಲ್ಲಿಸಿರುವುದು, ಅರ್ಜಿ ಸಲ್ಲಿಸಿರುವ ದಿನಾಂಕದಂದು ನಿಗಧಿತ ವಯೋಮಿತಿ ಮೀರದಿರುವುದು, ನಿಗಧಿತ ಶೈಕ್ಷಣಿಕ ವಿದ್ಯಾರ್ಹತೆ ಹೊಂದಿರುವುದು, ನಿಗಧಿತ ಆದಾಯ ಮಿತಿಯನ್ನು ಮೀರದಿರುವುದು ಇತ್ಯಾದಿಗಳನ್ನು ಪೂರೈಸಿರಬೇಕು.
3. ಅನುಕಂಪದ ಆಧಾರದಲ್ಲಿ ನೇಮಕಾತಿಗೊಳ್ಳುವ ಅಭ್ಯರ್ಥಿಗಳ ನೇಮಕಾತಿ ಅವರುಗಳು ಮುಂದೆ ಕರ್ತವ್ಯಕ್ಕೆ ವರದಿಮಾಡಿಕೊಳ್ಳುವ ದಿನಾಂಕದಿಂದ ಜಾರಿಗೆ ಬರುತ್ತದೆ.

4. ಅನುಕಂಪದ ಆಧಾರದಲ್ಲಿ ನೇಮಕಗೊಳ್ಳುವ ಅಭ್ಯರ್ಥಿಗಳು ಪೂರ್ವಾನ್ವಯವಾಗುವಂತೆ (Retrospective effect) ಯಾವುದೇ ಆರ್ಥಿಕ ಸೌಲಭ್ಯಗಳು, ಸೇವಾ ಸೌಲಭ್ಯಗಳು, ಹಾಗೂ ಇತರೆ ಸೌಲಭ್ಯಗಳಿಗೆ ಅರ್ಹರಾಗಿರುವುದಿಲ್ಲ.

ಆದೇಶದ ಮೇರೆಗೆ,

Gopalk
ನಿರ್ದೇಶಕರು
(ಆಡಳಿತ ಮತ್ತು ಮಾನವ ಸಂಪನ್ಮೂಲ)

ಗೆ,

1. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಜೆಸ್ಕಾಂ/ಹೆಸ್ಕಾಂ/ಮೆಸ್ಕಾಂ/ಸೆಸ್ಕ್/ಪಿ.ಸಿ.ಕೆ.ಎಲ್.
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂಗಳು.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂಗಳು.
4. ಎಲ್ಲಾ ಮುಖ್ಯ ಇಂಜನಿಯರ್(ವಿ), ಕವಿಪ್ರನಿನಿ/ಎಸ್ಕಾಂಗಳು.
5. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಹಣಕಾಸು)/ನಿರ್ದೇಶಕರು(ಪ್ರಸರಣ)/ನಿರ್ದೇಶಕರು(ಆಡಳಿತ ಮತ್ತು ಮಾನವ ಸಂಪನ್ಮೂಲ).

www.kptcl.com/eprasarana for information of:

6. ಎಲ್ಲಾ ಅಧೀಕ್ಷಕ ಇಂಜನಿಯರ್(ವಿ)/ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
7. ಎಲ್ಲಾ ಕಾರ್ಯನಿರ್ವಾಹಕ ಇಂಜನಿಯರ್(ವಿ)/ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.

ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:-

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ (ನೋಂದಣಿ ಸಂಖ್ಯೆ: 659) ಹಾಗೂ ನಿರ್ದೇಶಕರು, ಕವಿಪ್ರನಿನಿ ಮತ್ತು ಎಲ್ಲಾ ಎಸ್ಕಾಂಗಳು.
2. ಶ್ರೀ.ಎ.ಎನ್.ಜಯರಾಜ್, ಅಧ್ಯಕ್ಷರು, ಕವಿಮಂ ಇಂಜನಿಯರ್‌ಗಳ ಸಂಘ, ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜನಿಯರ್‌ಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ(ರಿ), ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮಾ ಇಂಜನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂಗಳ ಪ.ಜಾ/ ಪ.ಪಂ ಅಧಿಕಾರಿಗಳ ಸಂಘ, ಬೆಂಗಳೂರು.